

ಪತ್ನಿ: ಐ ಹೇಟ್ ಯೂ....
ಪತಿ: ಓಹ್, ಎಂಥಾ ಕಾಕತಾಳೀಯ!

★★★

ಮಹಿಳೆ: ಒಂದು ವಾರದಿಂದ ನನ್ನ ಪತಿ ಕಾಣೆಯಾಗಿದ್ದಾರೆ ಸ್ವಾಮಿ.
ಪೊಲೀಸ್: ಅವರ ಗುರುತಿನ ನಿಶಾನೆಯೇನಾದರೂ ಇದೆಯೇ?
ಮಹಿಳೆ: ಇವೆ. ಇವನು ಮುನ್ನ.. 6 ವರ್ಷ ಮತ್ತು ಇವಳು ಪಿಂಕಿ 3 ವರ್ಷ!

★★★

ಚಾಣಾಕ್ಷೆ ಪತ್ನಿ ತನ್ನ ಪತಿಗೆ ಹೀಗೊಂದು ಸೂಚನೆ ಬರೆದಿಡುತ್ತಾಳೆ, 'ನಾನು ಗೆಳತಿಯರೊಂದಿಗೆ ಹೊರಗೆ ಡಿನ್ನರ್‌ಗೆ ಹೋಗುತ್ತಿದ್ದೇನೆ, ನಿಮ್ಮ ಡಿನ್ನರ್ ಅಡುಗೆ ಪುಸ್ತಕದ ಪುಟ 24ರಲ್ಲಿದೆ ಮತ್ತು ಪದಾರ್ಥಗಳು 'ರಿಲಯೆನ್ಸ್ ಫ್ರೆಶ್' ನಲ್ಲಿವೆ...!

★★★

ಪತ್ನಿಯಿಂದ ಪತಿಗೊಂದು ಪ್ರಶ್ನೆ: ಇಂದು ಸಂಜೆ ನೀವು ನನ್ನನ್ನು ಹೊರಗಡೆ ಡಿನ್ನರ್‌ಗೆ ಕರೆದೊಯ್ಯುವಿರಾ....?
ನಿಮ್ಮ ಆಯ್ಕೆಗಳು:–
ಅ) ಹೌದು
ಇ) ಹಾಂ
ಉ) ಖಂಡಿತಾ

★★★

ಬಾಸ್: ಏನು ಕಾಲ ಬಂತೂಂತ ಹೇಳ್ತೀಯಾ.... ನನ್ನ ಸೆಕ್ರೆಟರಿ ನಿನ್ನೆ ರಿಸೈನ್ ಮಾಡಿದಳು ಕಣಯ್ಯ.
ಗೆಳೆಯ: ಏಕೆ?
ಬಾಸ್: ಮೊನ್ನೆ ಸಂಜೆ 'ಕಾಫಿ ಡೇ'ಯಲ್ಲಿ ನಾನು ಪತ್ನಿಯ ಜೊತೆಯಲ್ಲಿ ಇರುವುದನ್ನು ಅವಳು ನೋಡಿ ಬಿಟ್ಟಳು ಅಷ್ಟೇ!

★★★

ಹೆಂಡತಿಯರಲ್ಲಿ 2 ವಿಧ...
1) ಶಾಂತ ಸ್ವಭಾವದ, ಸಹಕಾರಿ ಮನೋಭಾವದ, ಪತಿಯ ಮಾತು ಪರಿಪಾಲಿಸುವ, ತುಂಬಾ ಪ್ರೀತಿಸುವ ಸುಂದರಿ ಪತ್ನಿ.
2) ನಿಮ್ಮ ಸ್ವಂತ ಪತ್ನಿ!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**


